ಈ ಸಂಸ್ಥೆಯ ಪುನಶ್ಚೇತನಕ್ಕೆಂದು ಆರ್ಥಿಕ ನೆರವಿಗಾಗಿ ಖಾದಿ ಆಯೋಗಕ್ಕೆ ಪ್ರಸ್ತಾವನೆ ಕಳುಹಿಸಿದೆ. ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದಿಂದ ಧನ ಸಹಾಯ ಬಂದ ಮೇಲೆ ಈ ಸಂಸ್ಥೆಯನ್ನು ಪುನಶ್ಚೇತನಗೊಳಿಸಲು ಖಾದಿ ಮಂಡಲಿಯು ಮುಂದಿನ ಕ್ರಮ ತೆಗೆದುಕೊಳ್ಳುವುದು.

ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯು ಈಗಾಗಲೇ ಈ ಸಂಸ್ಥೆಗೆ ಪುನಶ್ಚೇತನಕ್ಕಾಗಿ ಕೆಲವು ಸಲಹೆಗಳನ್ನು ನೀಡಿದೆ.

ಶ್ರೀ ಕೆ. ಹೆಚ್. ಪಾಟೀಲ್.—ಸ್ವಾಮಿ, ತಮಗೆ ನೋಟೀಸ್ ಕೊಡುವಾಗ ಆದರ ಜೊತೆಗೆ ಲಿಖಿತ ವರದಿಯನ್ನು ಸಹ ಕಳುಹಿಸಿದ್ದೆ. ತಮಿಳುನಾಡಿನಲ್ಲಿ ಸಿಕ್ಕಿದಂಥ ವ್ಯಕ್ತಿ ಕೊಲೆಯಾಗಿದ್ದಾನೆಂದು ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಸುಳ್ಳು ಆಪಾದನೆ ಹೊರಿಸಿ ಕಟ್ಟಳೆ ಹಾಕಿಸಿದ್ದಾನೆ. ಊರಿನಲ್ಲಿ ಸಾರ್ವಜನಿಕರು ಸೇರಿ ಆ ವ್ಯಕ್ತಿಯನ್ನು ಹಿಡಿದು ತಂದು ಪೋಲೀಸ್ ಸ್ಟೇಷನ್‌ಗೆ ಹಾಜರ್ ಮಾಡಿದ್ದಾರೆ. ಇದರಿಂದ ನಿರಪರಾಧಿಗಳಿಗೆ ಹಾಗೂ ಕಾಂಗ್ರೆಸ್ ಕಾರ್ಯಕರ್ತರಿಗೆ ಹೆಚ್ಚು ತೊಂದರೆಯಾಗಿದೆ. ಇದರ ಬಗ್ಗೆ ಯೋಗ್ಯವಾದಂಥ ನಿಷ್ಪಕ್ಷವಾದ ತನಿಖೆಮಾಡಿ ನ್ಯಾಯ ಒದಗಿಸಿಕೊಡಬೇಕೆಂದು ಮಾನ್ಯ ರಾಚಯ್ಯ ನವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಈಗ ಬಂದಂಥ ವರದಿಯನ್ನು ತಿಳಿಸಿದ್ದೇನೆ. ತಮಿಳುನಾಡಿನ ವ್ಯಕ್ತಿಗೆ ಸಂಬಂಧಪಟ್ಟಂತ ವಿಷಯ ಏನಿದೆ. ಆದರ ಬಗ್ಗೆ ವಿಚಾರಣೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

(2) ನಂಜನಗೂಡು ಬದನಹಾಳು ಖಾದಿ ಮತ್ತು ಗ್ರಾಮೋದ್ಯೋಗ ಕೇಂದ್ರದ ಬಗ್ಗೆ.

ಶ್ರೀ ಡಿ. ಟಿ. ಜಯಕುಮಾರ್.—ಮಾನ್ಯ ಅಧ್ಯಕ್ಷರೇ, ನಂಜನಗೂಡು ತಾಲ್ಲೂಕು, ಬದನಹಾಳು ಖಾದಿ ಮತ್ತು ಗ್ರಾಮೋದ್ಯೋಗ ಕೇಂದ್ರದ ಬಗ್ಗೆ ಸಣ್ಣ ಕೈಗಾರಿಕಾ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಟಿ. ಡಿ. ಜಯಕುಮಾರ್.— ಮಾನ್ಯ ಅಧ್ಯಕ್ಷರೆ, ಮಹಾತ್ಮಾಗಾಂಧಿಯವರು ಭೇಟಿಕೊಟ್ಟಂತಹ ಸ್ಥಳಮಾಹತ್ವವನ್ನು ಕಂಡುಹಿಡಿದು, ಅಲ್ಲಿ ಖಾದಿ ಗ್ರಾಮೋದ್ಯೋಗವನ್ನು ತೆರೆದು ಖಾದಿಬಟ್ಟೆ ತಯಾರು ಮಾಡುವ ಸಂಸ್ಥೆ ಇದಾಗಿದೆ. ೨೦-೩೦ ವರ್ಷಗಳ ಕಾಲ ಇದು ಚೆನ್ನಾಗಿ ಕೆಲಸ ಮಾಡಿದೆ. ಆದರೆ, ಸುಮಾರು ೧೦-೧೨ ವರ್ಷಗಳಿಂದ ಅಲ್ಲಿರುವ ಆಡಳಿತ ವರ್ಗದವರು ಹಣವನ್ನು ದುರುಪಯೋಗಪಡಿಸಿಕೊಂಡು, ಹೀಗಾಗಿ, ಈ ಸಂಸ್ಥೆ ಸಂಯಾಗಿ ನಡೆಯುಕೊಂಡು ಬರುತ್ತಿಲ್ಲ. ೧೦-೧೨ ಲಕ್ಷ ರೂಪಾಯಿಗಳವರೆಗೆ ನಷ್ಟವಾಗಿದೆ. ಇದರಿಂದ ೨೦೦ ರಿಂದ ೩೦೦ ಜನ ಕಾರ್ಮಿಕರು ಬೀದಿಪಾಲಾಗಿದ್ದಾರೆ ನಾವು ಅಲ್ಲಿಗೆ ಹೋದಾಗ, ಏನು ಮಾಡಿದಿರಿ ಎಂದು ಜನ ಪದೇಪದೇ ನಮ್ಮನ್ನು ಕೇಳುತ್ತಾರೆ? ಕಳೆದ ಆಕ್ಟೋಬರ್ ೨೦ರಂದು ಶ್ರೀ ನಜೀರ್‌ಸಾ ಬ್ಯಾರವರು ಅಲ್ಲಿಗೆ ಬಂದಾಗ, ತರಬೇತಿ ಕೇಂದ್ರವನ್ನು ಸ್ಥಾಪನೆ ಮಾಡುತ್ತೇವೆಂದು ಹೇಳಿದ್ದರು ಆದರೆ ಇದುವರೆಗೂ ಆ ಕಾರ್ಯ ಆಗಿಲ್ಲ ಯಾವ ಕಾರ್ಮಿಕರು ಕೆಲಸಮಿಲ್ಲದೇ ಇದಾರೋ, ಅಂಥವರಿಗೆ ಉದ್ಯೋಗಾವಕಾಶ ಮಾಡಿಕೊಟ್ಟು, ಮತ್ತು ತರಬೇತಿ ಕೇಂದ್ರವನ್ನು ಮುತ್ತೆ ನಡೆಸುತ್ತೇವೆಂದು ಹೇಳಿದ್ದರೂ ಕೂಡ, ಇದೂ ಕಾರ್ಯಗತ ಆಗಿಲ್ಲ. ಇದುವರೆಗೂ ಈ ಕೆಲಸ ಆಗಿಲ್ಲ, ತಪ್ಪಿತಸ್ಥರ ಮೇಲೆ ಸರಿಯಾದ ಕ್ರಮವನ್ನು ತೆಗೆದುಕೊಂಡು ಬೀದಿಪಾಲಾಗಿರುವ ಕಾರ್ಮಿಕರಿಗೆ ತಕ್ಷಣವೇ ಕೆಲಸ ಒದಗಿಸಲು ಸರ್ಕಾರವು ಧನಸಹಾಯಮಾಡಿ ಈ ಸಂಸ್ಥೆಯನ್ನು ಉಳಿಸಬೇಕು. ಯಾವ ಸಂಸ್ಥೆ ಕರ್ನಾಟಕ ರಾಜ್ಯದಲ್ಲಿ ಗ್ರಾಮೋದ್ಯೋಗಕ್ಕೆ ಮಾದರಿಯಾಗಬೇಕಾಗಿತ್ತೋ, ಅಂತ ಸಂಸ್ಥೆ ಇಂದು ಈ ದುಸ್ಥಿತಿಗೆ ಬಂದಿರುವುದು ತುಂಬಾ ಶೋಚನೀಯ ಇದು ಸರ್ಕಾರಕ್ಕೂ ಅಪಮಾನ ತರತಕ್ಕಂತಹ ವಿಚಾರ. ಈ ಜನತಾ ಸರ್ಕಾರವು ಇಂತಹ ಸಂಸ್ಥೆಗಳ ಬಗ್ಗೆ ಹೆಚ್ಚಿನ ಆಸಕ್ತಿವಹಿಸಿ, ಸಂಸ್ಥೆಯನ್ನು ಚೆನ್ನಾಗಿ ನಡೆಸಿಕೊಂಡು ಹೋಗಬೇಕೆಂದು ಹೇಳುತ್ತೇನೆ ಸರ್ಕಾರಕ್ಕೆ ಇದರಿಂದ ಲಕ್ಷಾಂತರ ರೂಪಾಯಿಗಳ ನಷ್ಟವಾದರೂ ಪರವಾಗಿಲ್ಲ; ಸರ್ಕಾರವು ಇದನ್ನು ವಹಿಸಿಕೊಳ್ಳಬೇಕೆಂದು ನಾನು ವಿನಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಬಿ. ದೇಶಪಾಂಡೆ (ಸಣ್ಣ ಕೈಗಾರಿಕೆಗಳ ಸಚಿವರು)—ಈ ಒಂದು ಸಂಸ್ಥೆಯನ್ನು ಸರ್ಕಾರವು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಖಾದಿ ಕಮಿಷನ್‌ಗೆ ಈ ವಿಷಯವನ್ನು ನಾವು ತಿಳಿಸಿದ್ದೇವೆ. ಇಂತಹ ಸಂಸ್ಥೆಗಳು ಎಷ್ಟೋ ಇವೆ. ಆರ್ಥಿಕ ತಜ್ಞರ ವರದಿ ಬಂದನಂತರ, ಈ ಸಂಸ್ಥೆಯನ್ನು ರಿವೈವ್ ಮಾಡಲು ಪ್ರಯತ್ನಮಾಡುತ್ತೇವೆ. ಈ ಸಂಸ್ಥೆಯಲ್ಲಿ ಹಿಂದಿನ ಮ್ಯಾನೇಜ್‌ಮೆಂಟ್ ಸಾಕಷ್ಟು ತೊಂದರೆ

ಕೊಟ್ಟಿದ್ದು ನಿಜ. ಈಗ ಹೊಸ ಮ್ಯಾನೇಜ್‌ಮೆಂಟ್ ಬಂದಿದೆ. ಯಾರು ತಪ್ಪಿತಸ್ಥರಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತೇನೆ. ಈ ತರಬೇತಿ ಕೇಂದ್ರದ ಬಗ್ಗೆ ನನಗೆ ಯಾವ ಮಾಹಿತಿಯೂ ಬಂದಿಲ್ಲ.

3. ಮಧುಗಿರಿ ಪುರಸಭೆಯ ವ್ಯಾಪ್ತಿಯಲ್ಲುಂಟಾದ ಗಂಭೀರ ಪರಿಸ್ಥಿತಿ ಬಗ್ಗೆ

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೆ, ಮಧುಗಿರಿ ಪುರಸಭೆಯ ವ್ಯಾಪ್ತಿಯಲ್ಲಿನ ಸರ್ವೆ ನಂಬರ್ ೧೦೬ರಲ್ಲಿ ಮನೆಗಳನ್ನು ಖಾಲಿ ಮಾಡಿಸಿರುವುದರಿಂದ ಉಂಟಾದ ಗಂಭೀರ ಪರಿಸ್ಥಿತಿಯ ವಿಚಾರದ ಬಗ್ಗೆ ನಗರಾಭಿವೃದ್ಧಿ, ಕಾನೂನು ಹಾಗೂ ಸಂಸದೀಯ ವ್ಯವಹಾರ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಸಚಿವರು).—ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆಯನುಸಾರ ಕೇಳಿ, ನಾನು ಈ ಕೆಳಕಂಡ ಹೇಳಿಕೆಯನ್ನು ಕೊಡುತ್ತೇನೆ.

ಮಧುಗಿರಿ ಪಟ್ಟಣದ ೧೦೬ನೇ ಸರ್ವೆ ನಂಬರ್‌ನಲ್ಲಿರುವ ಜಮೀನು ಆ ಪುರಸಭೆಗೆ ಸೇರಿದ್ದು. ಆ ಜಮೀನಿನ ಮೇಲೆ ಕಳೆದ ಸೆಪ್ಟೆಂಬರ್ ಮಾಹೆಯಲ್ಲಿ ೮೪ ಗುಡಿಸಲುಗಳು/ಕಟ್ಟಡಗಳು/ಮನೆಗಳು ಅನಧಿಕೃತವಾಗಿ ಬಂದಿದ್ದವು. ಅವುಗಳ ಪೈಕಿ ೨೪ ಗುಡಿಸಲುಗಳಲ್ಲಿ ಜನ ವಾಸಿಸುತ್ತಿದ್ದು ಉಳಿದವುಗಳು ಇನ್ನೂ ಅಪೂರ್ಣ ಸ್ಥಿತಿಯಲ್ಲಿದ್ದವು ಅಥವಾ ಪೂರ್ಣವಾಗಿದ್ದರೂ ಅಲ್ಲಿ ಇನ್ನು ಯಾರೂ ವಾಸಿಸುತ್ತಿರಲಿಲ್ಲ, ಹಾಗೆ ಬರಿದಾದ ಹಾಗೂ ಇನ್ನೂ ಅಪೂರ್ಣವಾದ ೪೧ ಗುಡಿಸಲು/ಮನೆಗಳನ್ನು ಸಾರ್ವಜನಿಕರಿಗಾಗುವ ತೊಂದರೆ ತಪ್ಪಿಸಲು, ಪಟ್ಟಣದ ಕಟ್ಟುನಿಟ್ಟಾದ ಬೆಳವಣಿಗೆಯಾಗಬೇಕೆಂಬ ದೃಷ್ಟಿಯಿಂದ ಹಾಗೂ ಆ ಸ್ಥಳಕ್ಕೆ ನೀರು ಮತ್ತು ಇತರ ಪೌರ ಸೌಲಭ್ಯಗಳನ್ನು ಒದಗಿಸುವುದು ಕಷ್ಟಸಾಧ್ಯವೆಂಬ ಕಾರಣಕ್ಕಾಗಿ ಪುರಸಭೆಯ ಅಧಿಕಾರಿಗಳು ಕಾನೂನು ರೀತ್ಯಾ ತಿಳಿವಳಿಕೆ ಕೊಟ್ಟ ನಂತರ ೨೮-೧-೮೬ರಂದು ತೆಗೆದು ಹಾಕಿದ್ದಾರೆ. ಬಡಜನ ವಾಸಿಸುತ್ತಿದ್ದ ೨೪ ಮನೆ/ಗುಡಿಸಲುಗಳನ್ನು ಮುಟ್ಟಿಲ್ಲ. ಅವು ಈಗಲೂ ನಿಂತಿವೆ. ಮಧುಗಿರಿಯಲ್ಲಿ ವಾತಾವರಣ ಶಾಂತವಾಗಿದೆ.

ಇಲ್ಲಿ ಮನೆ ಕಟ್ಟಿಕೊಂಡವರೆಲ್ಲರೂ ಮನೆಗಳಿಲ್ಲದ ಬಡಪರಲ್ಲ. ಮಧುಗಿರಿ ಪಟ್ಟಣದಲ್ಲಿ ಸ್ವಂತ ಅಥವಾ ಬಾಡಿಗೆ ಮನೆಗಳಿದ್ದವರೂ ಈ ೧೦೬ನೇ ಸರ್ವೆ ನಂಬರಿನಲ್ಲಿ ಮನೆಗಳನ್ನು ಕಟ್ಟಿದ್ದರು, ಉದಾಹರಣೆಗಾಗಿ ಹೇಳುವುದಾದರೆ ನೀರಾವರಿ ಖಾತೆಯ ಒಬ್ಬ ನೌಕರನೂ ಇಲ್ಲಿ ಒಂದು ಮನೆ ಕಟ್ಟಿಸಿದ್ದಾನೆ. ಸದ್ಯದಲ್ಲಿಯೇ ಪುರಸಭೆಯು ಕಡುಬಡವರಿಗಾಗಿ ನಿವೇಶನಗಳನ್ನು ಹಂಚಲು ಜಮೀನನ್ನು ವಶಪಡಿಸಿಕೊಳ್ಳಲಿದೆ. ಬರುವ ಯುಗಾದಿ ಹಬ್ಬದೊಳಗಾಗಿ ನಿವೇಶನ ಇಲ್ಲದವರಿಗೆ ನಿವೇಶನಗಳನ್ನು ಕೊಡುವ ಕಾರ್ಯಕ್ರಮವನ್ನು ಪುರಸಭೆ ಇಟ್ಟುಕೊಂಡಿದೆ.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಅಧ್ಯಕ್ಷರೆ, ಈ ಪ್ರದೇಶದ ಜನರು ಪುರಸಭೆಗೆ ಹಣ ಕಟ್ಟಿ, ನಾವು ನಿವೇಶನ ರಹಿತರು, ನಮಗೆ ನಿವೇಶನ ಕೊಡಬೇಕೆಂಬ ಮನವಿಯನ್ನು ೧೯೭೬ರಿಂದಲೂ ಪುರಸಭೆಗೆ ಕೊಟ್ಟುಕೊಂಡು ಬಂದಿದ್ದಾರೆ. ಆದರೂ ಸಹ, ಇಲ್ಲಿಯವರೆಗೂ ನಿವೇಶನ ಕೊಟ್ಟಿಲ್ಲ. ಅದಕ್ಕಾಗಿ ಅವರು ಅಲ್ಲಿ ಶೆಡ್‌ಗಳನ್ನು ಹಾಕಿಕೊಂಡಿದ್ದಾರೆ. ಅವರನ್ನು ಯಾವರೀತಿಯಲ್ಲಿ ಅಲ್ಲಿಂದ ತೆಗೆದಿದ್ದಾರೆಂದರೆ ಅವರ ಕೈಗೆ ೨೬ನೇ ತಾರೀಖು ನೋಟೀಸ್ ಹೋಗಿದೆ. ೨೮ನೇ ತಾರೀಖು ಬೆಳಗ್ಗೆ ೬ ಗಂಟೆಗೆ ಗುಡಿಸಲುಗಳನ್ನು ಅಸಿಸ್ಟೆಂಟ್ ಕಮಿಷನರ್ ಮತ್ತು ಪುರಸಭೆಯ ಮುಖ್ಯಾಧಿಕಾರಿಯವರು ಎದುರಿಗೇ ನಿಂತು ಕೀಳಿಸಿದ್ದಾರೆ. ಅಷ್ಟೇ ಅಲ್ಲ, ಬೆಳಗ್ಗೆ ತಾನೇ ಚರ್ಚೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ನಿವೇಶನ ರಹಿತರಿಗೆ ನಿವೇಶನ ಹಂಚುವಲ್ಲಿ ಸರ್ಕಾರವು ಒಂದು ಎತ್ತರವಾದ ಗುರಿಯನ್ನು ಇಟ್ಟುಕೊಂಡಿದೆ ಎಂದು ಆದರೆ, ನಿವೇಶನ ರಹಿತರಿಗೆ ಬೇರೆ ವ್ಯವಸ್ಥೆ ಮಾಡದೇ, ಪುರಸಭೆಯ ಸರಹದ್ದಿನಲ್ಲಿ ನಿವೇಶನ ನೀಡದೇ, ಅಲ್ಲಿದ್ದ ಗುಡಿಸಲುಗಳನ್ನು ಕೀಳಿಸಿದ್ದಾರೆ. ಈ ವಿಷಯವನ್ನು ಚರ್ಚಿಸಲು ಪುರಸಭೆಯು ಸಭೆ ಸೇರಬೇಕಾಗಿತ್ತು. ೨೮-೧-೮೬ರಂದು ಇಲ್ಲಿ ಈ ಗುಡಿಸಲುಗಳನ್ನು ಡಿಮಾಲಿಶ್ ಮಾಡಿದ್ದಾರೆ. ಇಪತ್ತು ಈ ಕಾರ್ಮಿಕರು ಏನಿದ್ದಾರೆ, ಅವರು ವಸತಿರಹಿತರಾಗಿದ್ದಾರೆ. ಅವರಿಗೆ ಸರಿಯಾಗಿ ಕಾಲಾವಕಾಶವನ್ನು ನೀಡದೆ, ಈ ಅಧಿಕಾರಿಗಳು ಅವರ ಗುಡಿಸಲುಗಳನ್ನು ಕೀಳಿಸಿದ್ದಾರೆ. ಆದುದರಿಂದ ಈ ಪುರಸಭೆಯ ಮುಖ್ಯಾಧಿಕಾರಿಯವರನ್ನು ಸಸ್ಪೆಂಡ್ ಮಾಡಬೇಕು ಮತ್ತು ನಿವೇಶನ ರಹಿತರಿಗೆ ಬೇರೆ ಕಡೆ ನಿವೇಶನ ಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.